ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ತಮ್ಮ ಮನೆಯ ಕಸವನ್ನು ಪಕ್ಕದ ಮನೆಯವರ ಕಾಂಪೌಂಡ್ ಒಳಗೆ ಎಸೆದು ಮಜಾ ನೋಡುತ್ತಾರಲ್ಲಾ ಕೆಲವರು?*



ಅದೊಂದು ಶ್ರೇಷ್ಠ ಕ್ರೀಡೆ; ಅದರಿಂದ ರಟ್ಟೆಗೆ ಬಲ, ಗಂಟಲಿಗೆ ಬಲ, ಹೊಸಹೊಸ ಪದಗಳ ಪರಿಚಯ, ಇತ್ಯಾದಿ ಲಾಭಗಳಿವೆ.

ಎ.ಕೆ. ಪಟ್ಟಾಭಿ, ಬೆಂಗಳೂರು

*ಆನೆ ಮತ್ತು ಅಳಿಯ – ಇವೆರಡರಲ್ಲಿ ಆನೆ ಪಳಗಿಸಲು ಅಂಕುಶ ಇದೆ. ಅಳಿಯನನ್ನು ಪಳಗಿಸಲು?*

ಅವನ ಯೋಗ್ಯತೆಗೆ ಅನುಗುಣವಾಗಿ ಕುಡಿನೋಟ, ಕೆಂಗಣ್ಣು, ನಗಾರಿಬಾಯಿ.

ರಾಜಶೇಖರಗೌಡ, ಕೊಟ್ಟೂರು

*ರಾಮ ಬಂದರೂ ರಾಗಿ ಬೀಸೋದು ತಪ್ಪೋಲ್ಲ ಅಲ್ಲವೇ?*

ತಪ್ಪುತ್ತದೆ. ಆ ರಾಮ ಹಿಟ್ಟಿನ ಗಿರಣಿಯ ಮಾಲಿಕನಾಗಿದ್ದರೆ!

ಓಂ ಚನ್ನೇಶ್, ಭದ್ರಾವತಿ

*ಸತ್ತವರ ಸಮಾಧಿಯ ಮೇಲೆ ಗೋರಿ ಏಕೆ ಕಟ್ಟುತ್ತಾರೆ?*



ಸರಿಯಾದ ಭಾರ ಹೇರದಿದ್ದರೆ ಎದ್ದು ಬಂದುಬಿಟ್ಟಾರೆಂದು!

ಪೇಂಟರ್ ಪಾಪು, ಸಂತೇಮರಹಳ್ಳಿ

*ಜೀವನದುದ್ದಕ್ಕೂ ಉತ್ತಮ ವ್ಯಕ್ತಿಯಾಗಿ ಬಾಳಲು ಸಾಧ್ಯವೇ ಇಲ್ಲ; ಸರಿ ತಾನೆ?*

ಸಾಧ್ಯ ಎನ್ನಲು ಲಾಲ್ ಬಹದ್ದೂರ್ ಶಾಸ್ತ್ರಿ, ಗುಲ್ಜಾರಿಲಾಲ್‌ನಂದಾ, ಕಲಾಂ ಮುಂತಾದವರ ಇತ್ಯಾದಿಗಳ ಪಡೆಯೇ ಇದೆ.

ಎಂ.ಎಸ್. ಸೋಮಶೇಖರ್, ಮೈಸೂರು

*ಹೆಂಡವನ್ನು ಕಂಡುಹಿಡಿದ ಪಾಪಾತ್ಮ ಯಾರು?*

ಕಂಡುಹಿಡಿದೇಬಿಟ್ಟರೇ? ಛೆ! ನೀವು ಅಷ್ಟು ಸುಲಭವಾಗಿ ಕೈಗೆ ಸಿಗುವ ಹಾಗೆ ಇಡಬಾರದಿತ್ತು ಬಿಡಿ!

ಆರತಿ ಘಟಿಕಾರ್, ದುಬೈ

*ಸಂಸಾರ ರಥ ಸುಗಮವಾಗಿ ಸಾಗಲು ಏನು ಮಾಡಬೇಕು?*

ಸಾಗುವ ದಾರಿಯ ಕಂಟ್ರಾಕ್ಟ್ ಅನ್ನು ಪಿಡಬ್ಲ್ಯೂಡಿ ಕಂಟ್ರಾಕ್ಟರಿಗೆ ಕೊಡದೆ ನೀವೇ ನಿರ್ಮಿಸಿಕೊಳ್ಳಬೇಕು!

ಶ್ರೀಧರ್ ಡಿ. ರಾಮಚಂದ್ರಪ್ಪ, ಚಿತ್ರದುರ್ಗ

*ದೇಶ ಕಾಯುವ ಯೋಧನಿಗೂ, ದೇಶದ ಬೆನ್ನೆಲುಬಾದ ರೈತನಿಗೂ ವ್ಯತ್ಯಾಸವೇನು?*

ಇಬ್ಬರೂ ಪ್ರಮುಖರೇ; ಕ್ಷೇತ್ರ ಮಾತ್ರ ವ್ಯತ್ಯಾಸ – ಗಡಿಗೊಬ್ಬ, ಗಡಿಗೆಗೊಬ್ಬ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ವ್ಯಾಯಾಮದಿಂದ ದೇಹ ಗಟ್ಟಿ; ಪ್ರಾರ್ಥನೆಯಿಂದ ಮನಸ್ಸು ಗಟ್ಟಿ; ಪ್ರೇಮಿಸುವುದರಿಂದ?*

ಹೆಂಡತಿ ಅಥವಾ ಹೆಂಡ – ಎರಡರಲ್ಲಿ ಒಂದು ಗಟ್ಟಿ!

ಎನ್.ಎಸ್. ಆನಂದ, ಕತ್ತರಿಗುಪ್ಪ

*ಸುಖದ ಬಯಕೆ ಚಟವಾಗುವುದೇಕೆ?*

ಸುಖದ ಇಳಿಜಾರಿನಲ್ಲಿ ವಿವೇಕದ ಬ್ರೇಕ್ ಹಿಡಿಯದಿರುವುದರಿಂದ.

ಜಿ.ಆರ್. ಉಮಾದೇವಿ, ಶಿವಮೊಗ್ಗ

*ಪ್ರಾಣಿಗಳ ಹಾಗೆ ಸಸ್ಯಗಳಿಗೂ ಜೀವವಿದೆ. ಅವುಗಳನ್ನು ಕೊಲ್ಲುವುದೂ ಸಹ ಪಾಪವಲ್ಲವೆ?*

ಸಸ್ಯ ಸ್ಥಾವರ, ಪ್ರಾಣಿ ಜಂಗಮ; ಸ್ಥಾವರಕ್ಕೆ ಅಳಿವು ಇರಬಹುದಂತೆ, ಜಂಗಮಕ್ಕಿಲ್ಲ!

ಎಚ್.ಆರ್. ದೇಸಾಯಿ, ರಾಯಚೂರು

*ಭಗವಂತನ ಧ್ಯಾನ ಮಾಡುವವರು ಕಣ್ಣುಗಳನ್ನೇಕೆ ಮುಚ್ಚಿರುತ್ತಾರೆ?*

ಅದೇ ಸರಿಯಾದ ಕ್ರಮ; ಕಣ್ಮುಚ್ಚಿದರೆ ಮುರಳಿಮೋಹನ, ಕಣ್ತೆರೆದರೆ ತರಳೆ ಮೋಹಿನಿ!

ಮೇಟಿ ಕೊಟ್ರಪ್ಪ, ಬಸರಕೋಡು

*ಹಸೀ ಸುಳ್ಳು ಇದ್ದಂತೆ ಹಸೀ ಸತ್ಯ ಏಕೆ ಇಲ್ಲ?*

ಸುಳ್ಳು ಆಗಾಗ್ಗೆ ಹುಟ್ಟುವುದರಿಂದ ಹಸಿ; ಸತ್ಯ ಎಂದಿನದೋ ಆದ್ದರಿಂದ ಹಸಿ ಇಲ್ಲ.

## ಬಹುಮಾನಿತ ಪ್ರಶ್ನೆ

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಕಂಡು ಕಾಣದಂತೆ, ಕೇಳಿ ಕೇಳಿಸದಂತೆ ನಾಟಕ ಆಡುವವರಿಗೆ ನಿಮ್ಮ ಉಪದೇಶ?*

ಗುಡ್. ಹಾಗೆಯೇ ಮುಂದುವರೆಸಿ. ಮಗ, ಸೊಸೆಯೊಂದಿಗೆ ಒಟ್ಟು ಕುಟುಂಬದಲ್ಲಿರುವಾಗ ಇದೇ ಸರಿಯಾದ ಕ್ರಮ.

ಬೋ.ಪಾ.ವೆಂಕಟೇಶ್, ಬೋದನಹೊಸಹಳ್ಳಿ

*ಮರಗಳು ಮಾತನಾಡುವಂತಿದ್ದಿದ್ದರೆ ಪ್ರಪಂಚ ಹೇಗಿರುತ್ತಿತ್ತು?*

'ಕಾಡುಹರಟೆ' ಎನ್ನುವುದಕ್ಕೆ ವಿಶೇಷ ಅರ್ಥ ಒದಗುತ್ತಿತ್ತು.

ಸಿಹಿಮೊಗೆ ರಮೇಶ್, ಮೈಸೂರು

*ಒಳ್ಳೆಯ ಸಾಂಸ್ಕೃತಿಕ ಸಭೆ, ಸಮಾರಂಭಗಳಲ್ಲಿ ಅಪ್ರಬುದ್ಧ, ದಡ್ಡ ರಾಜಕಾರಣಿಗಳನ್ನು ಕರೆಸುವುದಾದರೂ ಏಕೆ?*

ದೃಷ್ಟಿಬೊಟ್ಟು!

ಕುಮಾರ ಚಲವಾದಿ, ಹೊಳೆನರಸೀಪುರ

*ಪುರೋಹಿತರು ಗಂಡಸರೇ ಏಕೆ? ಹೆಂಗಸರೇಕಿಲ್ಲ?*



ಭಕ್ತನ ಗಮನ ದೇವರ ಕಡೆಯೇ ಇರಲೆಂಬ ಸದಾಲೋಚನೆ!

ವಿ. ಹೇಮಂತಕುಮಾರ್, ಬೆಂಗಳೂರು

*ಚುನಾಯಿಸುವುದಕ್ಕೂ, ಚುಡಾಯಿಸುವುದಕ್ಕೂ ವ್ಯತ್ಯಾಸವೇನು?*

ಚುನಾಯಿಸಿದರೆ ನಿದ್ದೆಭಾಗ್ಯ, ಚುಡಾಯಿಸಿದರೆ ಮುದ್ದೆಭಾಗ್ಯ.

ಹಾಡ್ಯ ಬಿ. ಜಯಾನಂದ, ಮೈಸೂರು

*ಆಗಿನ ಶಬರಿಗೂ, ನಿಮ್ಮ ಉತ್ತರಕ್ಕಾಗಿ ಕಾಯುವ ನಮಗೂ ಏನು ವ್ಯತ್ಯಾಸ?*

ಶಬರಿ ನೀಡಿದ್ದು ಎಂಜಲು; ಈ ಉತ್ತರಗಳು ನಿಮಗಾಗಿಯೇ ಫ್ರೆಷ್ ಆಗಿ ತಯಾರಾದಂತಹವು!

■ ರಾಮ್